ಸಹಕಾರಿಗಳ ನಿಬಂಧಕರ ಕಛೇರಿ
ನಂ. 1, ಅಲಿಅಸ್ಕರ್ ರಸ್ತೆ,
ಬೆಂಗಳೂರು - 560 052,

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರು ಹಾಗೂ ಚೀಟಿ ಪ್ರಬಂಧಕರ ಕಛೇರಿ,ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52

**ವಿಷಯ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರಾಜಾಜಿನಗರ, ಬೆಂಗಳೂರು ಇದರ ಉಪವಿಧಿ ತಿದ್ದುಪಡಿ ಕುರಿತು.

**ಉಲ್ಲೇಖ:** ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರಾಜಾಜಿನಗರ, ಬೆಂಗಳೂರು ಇವರ ಪತ್ರ ಸಂಖ್ಯೆ: 15.01.2021.

******

ಪ್ರಸ್ತಾವನೆ:–

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರಾಜಾಜಿನಗರ, ಬೆಂಗಳೂರು ಇದರ ಉಪವಿಧಿಗಳ ಸಂಖ್ಯೆ: 4.22, 4.25, 4.28, 14, 21.1, 31, 35ಎ ಹಾಗೂ ಹೊಸ ಸೇರ್ಪಡೆ ಸೇರಿ ತಿದ್ದುಪಡಿಗಾಗಿ ವಾರ್ಷಿಕ ಸಾಮಾನ್ಯಸಭೆ ಒಪ್ಪಿಗೆ ಪಡೆದು, ಉಲ್ಲೇಖಿತ ಪತ್ರದ ಮೂಲಕ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಸ್ತಾವೆ ಸಲ್ಲಿಸಿರುತ್ತಾರೆ.

ಪ್ರಸ್ತಾವೆಯನ್ನು ಪರಿಶೀಲಿಸಲಾಗಿ ದಿನಾಂಕ: 19–12–2020 ರಂದು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ವೀಡಿಯೋ ಕಾನ್ಪರೆನ್ಸ್/ವರ್ಚುಯಲ್ ಮೀಟಿಂಗ್, ಜೂಮ್ ವೀಡಿಯೋ ವೆಬಿನಾರ್ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರನ್ನು ಕೇಂದ್ರವಾಗಿಟ್ಟು ಕರೆಯಲಾದ ಸಭೆಯಲ್ಲಿ ಉಪನಿಯಮ ತಿದ್ದುಪಡಿಗೆ ಅನುಮೋದನೆ ದೊರೆತಿದ್ದು, ಅಗತ್ಯ ದಾಖಲೆಗಳೊಂದಿಗೆ ಹಾಗೂ ಉಪನಿಯಮ ತಿದ್ದುಪಡಿ ಶುಲ್ಕ ರೂ.2000/–ಗಳನ್ನು ದಿ: 18.01.2021 ರಂದು ಚಲನ್ ಸಂ:CR0121042500307128 ಮೂಲಕ ಸರ್ಕಾರದ ಖಜಾನೆಗೆ ಪಾವತಿಸಿ ನಿಗದಿತ ಕಾಲಾವಧಿಯೊಳಗೆ ಪ್ರಸ್ತಾವೆ ಸಲ್ಲಿಸಿರುತ್ತಾರೆ.

ತಿದ್ದುಪಡಿಗೆ ಪ್ರಸ್ತಾಪಿಸಿರುವ ಉಪವಿಧಿ ಸಂ: 4.22, 4.25, 14, 21.1 ಹಾಗೂ ಹೊಸಸೇರ್ಪಡೆಯು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅವಕಾಶಗಳಿಗೆ ಒಳಪಟ್ಟಿದ್ದು, ಇದನ್ನು ಅನುಮೋದಿಸಲು ಹಾಗೂ ತಿದ್ದುಪಡಿಗೆ ಪ್ರಸ್ತಾಪಿಸಿರುವ ಉಪವಿಧಿ 4.28–ಹೊಸ ಸೇರ್ಪಡೆ,31ಇದು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕ್ಕೆ ಅನುಗುಣವಾಗಿಲ್ಲದ ಕಾರಣ ತಿರಸ್ಕರಿಸಲು, ಉಪನಿಯಮ ಸಂಖ್ಯೆ 35ಎ ನಲ್ಲಿ ಪ್ರಾಂತೀಯ ನಿರ್ದೇಶಕರ ಸಮಿತಿಯ ರಚನೆಗೆ ಅವಕಾಶವಿದ್ದು, ಈ ಅವಕಾಶದ ಪರಿಣಾಮವಾಗಿ ಸಮಿತಿ ರಚನೆ ಕುರಿತಂತೆ ಅವಕಾಶವಿರುವ ಹಿನ್ನೆಲೆಯಲ್ಲಿ ಉಪನಿಯಮ ಸಂಖ್ಯೆ 35ಎ ಅನ್ನು ಕೈಬಿಡಲು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

## –:ಆದೇಶ:–

**ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ಉ.ನಿ.ತಿ/181/2021–22** **ದಿನಾಂಕ: 10 –12–2021**

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 11(4) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎಸ್. ಜಿಯಾಉಲ್ಲಾ. ಭಾ.ಆ.ಸೇ, ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು. ಆದ ನಾನು **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರಾಜಾಜಿನಗರ, ಬೆಂಗಳೂರು** ಸಹಕಾರಿಯ ಉಪವಿಧಿ ಸಂಖ್ಯೆ: 4.22, 4.25, 14, 21.1, ಹೊಸಸೇರ್ಪಡೆ ಇವುಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದಿಸಿ ನೊಂದಾಯಿಸಿರುತ್ತೇನೆ.

ಷರತ್ತುಗಳು:–

ಸಂಘದ ಯಾವುದೇ ಉಪವಿಧಿಗಳ ಅವಕಾಶಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ತಿದ್ದುಪಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ಇವುಗಳಡಿ ಇರುವ ಅವಕಾಶಗಳಿಗೆ ವ್ಯತಿರಿಕ್ತವಾಗಿದ್ದರೆ ಅಥವಾ ಅಸಂಗತವಾಗಿದ್ದರೆ, ಅವುಗಳು ಸದರಿ ಕಾಯ್ದೆ ಮತ್ತು ನಿಯಮಗಳನ್ವಯ ರದ್ದಾಗುತ್ತದೆ ಹಾಗೂ ಜಾರಿ ಬರುವುದಿಲ್ಲ.

**ನೋಂದಾಯಿಸಿ ಅನುಮೋದಿಸಿದ ಉಪವಿಧಿಗಳು**

| ಕ್ರ.ಸಂ | ಉಪವಿಧಿ ತಿದ್ದುಪಡಿ ಸಂಖ್ಯೆ | ಅನುಮೋದಿಸಿ ನೋಂದಾಯಿಸಿದ ನಂತರ ಉಪವಿಧಿಗಳ ಸ್ವರೂಪ |
|---|---|---|
| 1. | 4.22, 4.25, 14, 21.1, ಹೊಸಸೇರ್ಪಡೆ | ಅನುಬಂಧ–5 ರಂತೆ ಅನುಮೋದಿಸಿ ನೋಂದಾಯಿಸಲ್ಪಟ್ಟಿದೆ. |

**ತಿರಸ್ಕರಿಸಿದ ಉಪವಿಧಿಗಳು**

| ಕ್ರ.ಸಂ | ಉಪವಿಧಿ ತಿದ್ದುಪಡಿ ಸಂಖ್ಯೆ | ತಿರಸ್ಕರಣಕ್ಕೆ ಕಾರಣ. |
|---|---|---|
| 1. | 4.28–ಹೊಸ ಸೇರ್ಪಡೆ, 31 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ ಅನುಗುಣವಾಗಿಲ್ಲದ ಕಾರಣ. |

**ಕೈಬಿಟ್ಟಿರುವ ಉಪವಿಧಿ**

| ಕ್ರ.ಸಂ | ಉಪವಿಧಿ ತಿದ್ದುಪಡಿ ಸಂಖ್ಯೆ | ಕೈಬಿಡಲು ಕಾರಣ |
|---|---|---|
| 1. | 35ಎ | ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿಯ ಹಾಲಿ ಇರುವ ಉಪನಿಯಮ ಸಂಖ್ಯೆ 35ರಲ್ಲಿ ಅವಕಾಶವಿದ್ದು, ಉಪನಿಯಮ ಸಂಖ್ಯೆ 35ಎನಲ್ಲಿ ಪ್ರಾಂತೀಯ ನಿರ್ದೇಶಕರ ಸಮಿತಿಯ ಅವಕಾಶದ ಪರಿಣಾಮವಾಗಿ ಸಮಿತಿಯ ರಚನೆ ಕುರಿತಂತೆ 2 ಅವಕಾಶಗಳು ಇರುವ ಹಿನ್ನೆಲೆಯಲ್ಲಿ ಉಪನಿಯಮ ಸಂಖ್ಯೆ 35ಎ ನ್ನು ಕೈಬಿಟ್ಟಿದೆ. |

1. ತಿದ್ದುಪಡಿಯಾದ ಉಪವಿಧಿಯು ನೋಂದಾಯಿಸಲ್ಪಟ್ಟ ದಿನಾಂಕದಿಂದ ಜಾರಿಗೆ ಬರತಕ್ಕದ್ದು.
2. ತಿದ್ದುಪಡಿ ಅನುಮೋದಿಸಿ ನೋಂದಾಯಿಸಿದ ಈ ಉಪವಿಧಿಯನ್ನು ಮೂಲ ಉಪವಿಧಿಗಳೊಂದಿಗೆ ಸಹಕಾರಿಯಲ್ಲಿ ಸಂರಕ್ಷಿಸಿಡತಕ್ಕದ್ದು.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿಯ ಮುದ್ರೆಯೊಂದಿಗೆ ದಿ: 10–12–2021ರಂದು ಹೊರಡಿಸಲಾಗಿದೆ.

OFFICE OF THE REGISTRAR OF CO-OPS IN KARNATAKA, BANGALORE
ಸಹಕಾರ ಸಂಘಗಳ ನಿಬಂಧಕರ ಕಛೇರಿ

ಎಸ್. ಜಿಯಾಉಲ್ಲಾ, ಭಾ.ಆ.ಸೇ
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ, ಡಾ॥ ರಾಜ್‌ಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು–560010.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಕಳುಹಿಸಿದೆ. :–**

1. ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು.
2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080-23378375-80 Email:souharda@souharda.coop

## ತಖ್ತೆ ನಂ – 5

ದಿನಾಂಕ : 19.12.2020 ರಂದು ನಡೆದ ಸಾಮಾನ್ಯ 19ನೇ ಸಭೆಯು ಶನಿವಾರದಂದು ಸ್ವೀಕರಿಸಿದ ಉಪವಿಧಿಯ ತಿದ್ದುಪಡಿ ನಕಲುಗಳು.

| ಉಪವಿಧಿ ಸಂಖ್ಯೆ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಉಪವಿಧಿ ವಿವರ |
|---|---|
| 2 | **ನೋಂದಾಯಿತ ಕಛೇರಿ**<br>ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೋಂದಾಯಿತ ಕಛೇರಿಯ ವಿಳಾಸವು 'ಸೌಹಾರ್ದ ಸಹಕಾರಿ ಸೌಧ', ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ಎಂದು ಇರತಕ್ಕದ್ದು. |
| | **Registered Office:**<br>The address of the registered office of the Karnataka State Souharda Federal Cooperative shall be 'Souharda Sahakari Soudha', Margosa Road, Mlleshwaram, Bengaluru-560055. |
| 4.22 | 'ಸಹಕಾರ ಚುನಾವಣಾ ಪ್ರಾಧಿಕಾರ' ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 39ಎಎ ಪ್ರಕರಣದಡಿಯಲ್ಲಿ ರಚಿತವಾದ ಸಹಕಾರ ಚುನಾವಣಾ ಪ್ರಾಧಿಕಾರ; |
| | 'Cooperative Election Authority' means, the cooperative election authority constituted under the Karnataka Cooperative Socities Act, 1959(11 of Karnataka Act No:11) of Sec.39AA; |
| 4.25 | 'ಚುನಾವಣಾಧಿಕಾರಿ' ಎಂದರೆ, ಸಹಕಾರ ಚುನಾವಣಾ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ; |
| | 'Election Officer' means an officer appointed by Cooperative Election authority; |
| 4.28 | 'ರಿಜಿಸ್ಟರ್' ಎಂದರೆ ಕೈ ಬರಹದ ಮೂಲಕ ಅಥವಾ ಲಿಖಿತವಾಗಿ ಅಥವಾ ಮುದ್ರಣದ ಮೂಲಕ ಅಥವಾ ಗಣಕೀಕೃತವಾದ ಅಥವಾ ಡಿಜಟಲೀಕೃತವಾದ, ಕಛೇರಿಗೆ ಸಂಬಂಧಿಸಿದ ದಾಖಲೆ ಅಥವಾ ದಸ್ತಾವೇಜು ಅಥವಾ ದಪ್ತರ ಅಥವಾ ಯಾದಿ ಅಥವಾ ಅಂಕಿ-ಅಂಶ.<br>'Register' means written or printed or computerised or digitalised document or record or list or statistics related to office. |
| 14 | **ಸಾಮಾನ್ಯ ನಿಕಾಯದ ಸದಸ್ಯರು:**<br>ಸದಸ್ಯ ಸಹಕಾರಿಯ ಮಂಡಲಿಯು ತನ್ನ ಮಂಡಲಿಯ ಓರ್ವ ಚುನಾಯಿತ ಸದಸ್ಯ/ನಿರ್ದೇಶಕನನ್ನು ನಿರ್ಣಯದ ಮೂಲಕ ಸಂಯುಕ್ತ ಸಹಕಾರಿಯ ಡೆಲಿಗೇಟ್ ಆಗಿರಲು ನಾಮನಿರ್ದೇಶಿಸಬಹುದು. ಆ ಡೆಲಿಗೇಟ್‌ನು ಸದಸ್ಯ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಯನ್ನು ಪ್ರತಿನಿಧಿಸತಕ್ಕದ್ದು. |

**Members of the General Body**

The Board of the member cooperative may nominate elected director by resolution to represent the co-operative in the Federal Co-operative. That delegate should represent the cooperative in Federal cooperative along with such resolution.

**21.1** ಮತಕ್ಷೇತ್ರವಾರು ಚುನಾಯಿಸ ಬೇಕಾದ ನಿರ್ದೇಶಕರ ಸಂಖ್ಯೆ :

ರಾಜ್ಯವನ್ನು ಕೆಳಗೆ ನಿರ್ದಿಷ್ಟಪಡಿಸಿದಂತೆ ಕಂದಾಯ ಜಿಲ್ಲೆಗಳನ್ನುಳ್ಳ ನಾಲ್ಕು ಪ್ರಾಂತಗಳಾಗಿ ವಿಂಗಡಿಸತಕ್ಕದ್ದು.

| ಪ್ರಾಂತ | ಒಳಪಡುವ ಜಿಲ್ಲೆಗಳು |
|---|---|
| ಬೆಂಗಳೂರು– | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ |
| ಮೈಸೂರು– | ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಮತ್ತು ಉಡುಪಿ |
| ಬೆಳಗಾವಿ– | ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ |
| ಕಲಬುರಗಿ – | ಕಲಬುರಗಿ, ಬೀದರ್, ಯಾದಗಿರಿ, ಬಳ್ಳಾರಿ, ವಿಜಯನಗರ, ರಾಯಚೂರು ಮತ್ತು ಕೊಪ್ಪಳ |

The State shall be divided into four regions consisting of the revenue districts as specified below:

| Region | Districts covered |
|---|---|
| Bengaluru- | Bengaluru, Bengaluru Rural, Ramanagara, Chikkaballapura, Kolara, Tumakuru, Shivamogga, Chitradurga and Davanagere. |
| Mysuru- | Mysuru, Mandya, Hassan, Chamarajanagara, Dakshina Kannada, Kodagu, Chickamagaluru and Udupi. |
| Belagavi- | Belagavi, Vijayapura, Bagalakote Dharawada, Gadaga, Haveri, and Uttara Kannada. |
| Kalaburagi - | Kalaburagi, Bidar, Yadgiri, Ballari, Vijayanagara, Raichur and Koppala. |

**31** **ಸಭೆಗಳನ್ನು ನಡೆಸುವ ಸ್ಥಳ:**

ಮಂಡಲಿಯ ಸಭೆಗಳೂ ಸೇರಿದಂತೆ ಎಲ್ಲಾ ಸಭೆಗಳನ್ನು ಸಾಮಾನ್ಯವಾಗಿ ಸಂಯುಕ್ತ ಸಹಕಾರಿಯ ನೋಂದಾಯಿತ ಕಛೇರಿ ಇರುವ ಸ್ಥಳದಲ್ಲಿ ನಡೆಸತಕ್ಕದ್ದು. ವಿಶೇಷ ಸಂದರ್ಭಗಳಲ್ಲಿ ಕಾರ್ಯವ್ಯಾಪ್ತಿಯ ಬೇರಾವುದೇ ಸ್ಥಳದಲ್ಲಿ ನಡೆಸಬಹುದು ಅಥವಾ ಸಂದರ್ಭಕ್ಕನುಗುಣವಾಗಿ ವೀಡಿಯೋ ಕಾನ್ಫರೆನ್ಸ್/ವರ್ಚುವಲ್/ ಟೆಲಿ ಕಾನ್ಫರೆನ್ಸ್ ಮೂಲಕ ಅಂಥ ಸಭೆಗಳನ್ನು ನಡೆಸಬಹುದು.

**Place of Meeting:**

Generally all the meetings including the board meetings shall be held in the registered office. In a special occasion or circumstances, meetings may be held in any other places within the area of operation or by video conference or by virtual or by teleconference.

**35ಎ.** ಕೈ ಬಿಟ್ಟಿದೆ. Deleted

ವ್ಯವಸ್ಥಾಪಕ ನಿರ್ದೇಶಕರು | ಆಡಳಿತ ಮಂಡಳಿ ಸದಸ್ಯರು | ಆಡಳಿತ ಮಂಡಳಿ ಸದಸ್ಯರು | ಅಧ್ಯಕ್ಷರು